ಹೀಗೆ ಭಾವಚಿತ್ರಗಳ ಮೆರವಣಿಗೆಯೊಂದಿಗೆ ಶುರುವಾಗುತ್ತದೆ ತಮಿಳು ಭಾಷೆಯ '96' ಸಿನಿಮಾ. ಅರ್ಥಗರ್ಭಿತ ಹಾಡಿನ ಸಾಲುಗಳೇ ಕೆ. ರಾಮಚಂದ್ರನ್ ಎಂಬ ಫೋಟೋಗ್ರಾಫರನ ಬದುಕಿಗೆ, ಒಂಟಿತನಕ್ಕೆ ಕನ್ನಡಿ ಹಿಡಿಯುತ್ತವೆ. ಅವನು ಫೋಟೋಗ್ರಫಿ ಕಲಿಸುವ ಗುರುವೂ ಹೌದು. ಕಲಿಯಲು ಬಂದವರಲ್ಲಿ ಒಬ್ಬ ತರಳೆಗೆ ಅವನೆಂದರೆ ಇಷ್ಟವೆನ್ನುವುದನ್ನೂ ಅವಳ ಕಣ್ಣೋಟವೇ ಖಾತರಿಪಡಿಸುತ್ತದೆ. ಆದರೆ, ಅವನದ್ದು ಒಂಟಿತನದ ಲೋಕ. ಕಡಲ ತಟದ ಮರಳ ಮೇಲೆ ಅವನು ಬರೆದ 'ಜಾನು' ಎಂಬ ಹೆಸರು ಯಾರದ್ದೋ ಎನ್ನುವ ಪ್ರಶ್ನೆಯನ್ನೂ ನಮ್ಮದೂ ಆಗಿಸಿ ಕುತೂಹಲದ ರೆಕ್ಕೆ ಹಚ್ಚುತ್ತಾರೆ ನಿರ್ದೇಶಕ ಸಿ. ಪ್ರೇಮ್ ಕುಮಾರ್.

ನೆಚ್ಚಿನ ವಿದ್ಯಾರ್ಥಿನಿ ಜತೆಗಿನ ಕಾರಿನ ಪಯಣ ಅಕಸ್ಮಾತ್ತಾಗಿ ಸಾಗುವುದು ತಂಜಾವೂರಿನ ರಸ್ತೆಗಳತ್ತ. ಕಾರಿನ ಕಿಟಕಿ ಕೆಳಗಿಳಿಸಿ, 'ಹೊರಗಿನ ಗಾಳಿಯ ಘಮಲು ತುಂಬಿಕೋ' ಎಂಬ ನುಡಿಪ್ರೇಮ ಅದು ಅವನದ್ದೇ ತವರೆನ್ನಲು ಸಾಕು. ತನ್ನ ಊರಿನ ಎಲ್ಲವನ್ನೂ ಕಾರೊಳಗಿಂದಲೇ ಅವಳಿಗೆ ಪರಿಚಯಿಸುವ ಅವನು, ಕೊನೆಗೆ ಸಾಗುವುದು ತಾನು ಕಲಿತ ಶಾಲೆಯತ್ತ. ಅಲ್ಲಿನ ಭದ್ರತಾ ಸಿಬ್ಬಂದಿಯ ಜೊತೆಗೂ ಇವನ ನೆನಪೊಂದು ಜತನವಾಗಿದೆ. ಈಗಲೂ ಆ ಭದ್ರತಾ ಸಿಬ್ಬಂದಿಗೆ ಕೀಟಲೆ ಮಾಡುವಷ್ಟು ಸಲಿಗೆಯೂ ಇದೆ. ಒಳಗೆ ನೇತುಹಾಕಿದ ಬೋರ್ಡಿನ ಮೇಲೆ ಇವನೂ ಓಟದಲ್ಲಿ ಗೆದ್ದದ್ದಕ್ಕೆ ಶಾಶ್ವತವಾಗಿ ಉಳಿದ ಹೆಸರು. ತನ್ನ ಹೆಸರನ್ನು ತಾನೇ ನೋಡಿ ಪುಳಕಗೊಳ್ಳುವ ನಾಯಕನ 'ಜಾನು' ನಮಗೆ ಕಾಣಿಸುವುದು ಅವನ ಅಂತರಂಗದ ಫ್ಲ್ಯಾಷ್ ಬ್ಯಾಕ್ ಮೂಲಕ.

ಅದೇ ತರಗತಿ. ಅದೇ ಬೆಂಚು. ಅವುಗಳ ಮೇಲೆ ಉಳಿದ ಹಳೆಯ ಪ್ರೇಮದ ನೆನಪು. ಜಾನಕಿ ದೇವಿ ಉರುಫ್ ಜಾನು ಅವನ ಪ್ರೇಮಿ. ಅವನು ಸದಾ ಕಾಲ ತನ್ನ ಹೆಸರನ್ನು ಹೇಳಿಕೊಳ್ಳುವುದು ಕೆ. ರಾಮಚಂದ್ರನ್ ಎಂದೇ. ಇಬ್ಬರೂ 1996ರ ಬ್ಯಾಚಿನ ಎಸ್ಸೆಸ್ಸೆಲ್ಸಿ ಕಲಿಯುವಾಗ ಮೂಡಿದ ಪ್ರೇಮವದು. ಆ ಪ್ರೇಮ ಕಥಾನಕವನ್ನು ನವಿರುತನ, ಮುಗ್ಧತೆ ತುಸುವೂ ಮುಕ್ಕಾಗದಂತೆ ಸೂಕ್ಷ್ಮವಾಗಿ ಹೇಳುತ್ತಾರೆ ನಿರ್ದೇಶಕರು. 'ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಕಾಸರಗೋಡು' ಸಿನಿಮಾದಲ್ಲಿ



## ಮೊದಲ ಯತ್ನಕ್ಕೇ ಶಹಬ್ಬಾಸ್ ಗಿರಿ

ನಿರ್ದೇಶಕ ಸಿ. ಪ್ರೇಮ್ ಕುಮಾರ್ ಸಿನಿಮಾಟೋಗ್ರಾಫರ್ ಆಗಿ ಕೆಲಸ ಕಲಿತವರು. ಪಸಂಗ (2009), ನಡುವುಳ ಕೊಂಜಂ ಪಕ್ಕತ ಕಾಣೊಂ (2012), ಸುಂದರ ಪಾಂಡಿಯನ್ (2012) ಅವರ ಸಿನಿಮಾಟೊಗ್ರಫಿಯ ಗಟ್ಟಿತನಕ್ಕೆ ಕೆಲವು ಉದಾಹರಣೆಯಾಗಬಲ್ಲ ತಮಿಳು ಸಿನಿಮಾಗಳು. '96' ನಿರ್ದೇಶಕರಾಗಿ ಅವರಿಗೆ ಮೊದಲ ಕೂಸು. ಅದನ್ನು ಅವರು ಬಹಳ ಮುಚ್ಚಟೆಯಿಂದಲೇ ತೂಗಿದ್ದಾರೆ.